		3) BHRAMAVAR	1	1	3	-	4	1
		4) KUNDAPUR	2	2	3	-	5	2
		5) BYNDUR	1	1	3	-	4	1
		6) KARKALA	2	2	5	-	7	2
		TOTAL	**10**	**10**	**21**	**-**	**31**	**10**
27	UTTARA KANNADA	1) ANKOLA	1	-	3	-	4	-
		2) BHATKAL	1	2	5	-	6	2
		3) HALIYAL	1	1	4	-	5	1
		4) HONNAVAR	1	-	3	-	4	-
		5) KARWAR	1	-	2	-	3	-
		6) KUMTA	1	-	3	-	4	-
		7) MUNDAGOD	1	1	5	-	6	1
		8) SIDDAPUR	1	-	2	-	3	-
		9) SIRSI	2	1	7	-	9	1
		10) SOOPA	-	-	1	-	1	-
		11) YELLAPURA	-	-	1	-	1	-
		TOTAL	**10**	**5**	**36**	**-**	**46**	**5**
GRAND TOTAL			**946**	**550**	**2000**	**153**	**2946**	**703**

2709 (3059) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ 10 ವರ್ಷಗಳಿಂದ ಹೆಚ್ಚು ಕಾಲಾವಧಿಗೆ ಸೇವೆ ಸಲ್ಲಿಸಿದವರನ್ನು ಹುದ್ದೆಯಿಲ್ಲದೆ ಜಿಲ್ಲಾ ಪಂಚಾಯತ್ ಕಛೇರಿಗಳಿಗೆ ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ ಅದಕ್ಕೆ ಕಾರಣಗಳೇನು;

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಂತಹ ಎಷ್ಟು ಜನರನ್ನು ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ನೇಮಿಸಿಕೊಳ್ಳಲಾಗಿದೆ;

ಈ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಒಂದೇ ಹುದ್ದೆ – ದ್ವಿತೀಯ ದರ್ಜೆ ನೌಕರರ ಸಮಾನ ವೃಂದ ಮತ್ತು ಹುದ್ದೆಯಲ್ಲಿ ಇರತಕ್ಕವರಿಗೆ ಹೆಚ್ಚುವರಿ ಹುದ್ದೆಯಲ್ಲಿ ನೇಮಕಗೊಂಡ ದಿನಾಂಕದಿಂದಲೇ ಪರಿಗಣಿಸಲು ಆದೇಶಿಸಿದ್ದು, ಎಲ್ಲಾ ಸವಲತ್ತುಗಳನ್ನು ನೀಡಬೇಕಾಗಿದ್ದರೂ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ರವರು ಈ ಆದೇಶವನ್ನು ಅನುಸರಿಸದೇ ಇರುವುದು ನಿಜವೇ;

ಉ) ನಿಜವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಈ ದಿನಗೂಲಿ ನೌಕರರು ಮಂಜೂರಾದ ಹುದ್ದೆಗಳಲ್ಲಿ ಇರುವುದಿಲ್ಲ. ಮಂಜೂರಾದ ಹುದ್ದೆಗಳಿಲ್ಲದೆ ಜಿಲ್ಲಾ ಪಂಚಾಯತ್ ಕಚೇರಿಗಳಲ್ಲಿ ಇವರನ್ನು ನೇಮಕ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುಲ್ಲ.

ಇ) ದಕ್ಷಿಣ ಕನ್ನಡದಲ್ಲಿ ಇಬ್ಬರು ಹಾಗೂ ಉಡುಪಿ ಜಿಲ್ಲೆಯಲ್ಲಿ ಇಬ್ಬರು ದಿನಗೂಲಿ ಕಾರ್ಮಿಕರು ಮಾತ್ರ ಇದ್ದಾರೆ. ಇವರು ರೇಷ್ಮೆ ಇಲಾಖೆಯ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ತಾಂತ್ರಿಕ ಸೇವಾ ಕೇಂದ್ರಗಳು ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕೆಲಸ ಮಾಡುತ್ತಿವೆ.

ಈ) ದಿನಗೂಲಿ ನೌಕರರ ಸೇವೆಯ ಸಕ್ರಮಗೊಂಡಲ್ಲಿ ಸಮಾನ ಸವಲತ್ತುಗಳನ್ನು ಕೊಡಲಾಗುತ್ತಿದೆ. ಸೇವೆಯ ಸಕ್ರಮಗೊಳ್ಳದಿದ್ದಲ್ಲಿ ಸಮಾನ ಸವಲತ್ತುಗಳನ್ನು ಕೊಡಲು ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

2710 (3399) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :– ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಯಂ ಉದ್ಯೋಗ ಕೈಗೊಳ್ಳಲು ಸರ್ಕಾರದಿಂದ ಯಾವ ಯಾವ ಸೌಲಭ್ಯ, ಪ್ರಯೋಜನಗಳನ್ನು ಯಾವ ಯಾವ ಉದ್ದೇಶಕ್ಕಾಗಿ ರೂಪಿಸಲಾಗಿದೆ;

ಆ) ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಜಿಲ್ಲೆಯ, ಯಾವ ಯಾವ ತಾಲ್ಲೂಕಿನ ಎಷ್ಟೆಷ್ಟು ಮಂದಿ, ಎಷ್ಟೆಷ್ಟು ಮೊತ್ತದ ಸೌಲಭ್ಯ / ಪ್ರಯೋಜನಗಳನ್ನು ಪಡೆದಿರುವರು;

ಇ) ಈ ಸೌಲಭ್ಯ /ಪ್ರಯೋಜನಗಳನ್ನು ಇನ್ನೂ ಹೆಚ್ಚು ಹೆಚ್ಚು ಮಂದಿ ಪಡೆದುಕೊಳ್ಳುವಂತಾಗಲು ಸರ್ಕಾರ ಯಾವ ಯಾವ ಕ್ರಮವಹಿಸಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು) :

ಅ) ಸ್ವಯಂ ಉದ್ಯೋಗ ಕೈಗೊಳ್ಳಲು ಕೇಂದ್ರ ಸರ್ಕಾರದ ಯೋಜೆನೆಯಾದ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಕೈಗಾರಿಕೆ, ಸೇವಾ ಮತ್ತು ವ್ಯಾಪಾರ ಘಟಕಗಳನ್ನು